ಷರತ್ತು—ಹರಾಜು ಕೈದಾದ ಕೂಡ್ಲೆ ಶೇಕಡಾ 25 ರೂಪಾಯಿನೆಂತೆ ಬೇವಣಿ ಹಾಜರ್ಮಾಡಬೇಕು. ಹರಾಜು ತಾರೀಖು ಲಾಗಾಯಿತು ವೊಂದು ವಾರದವಳಗಾಗಿ ಬಾಕಿ ಮೊಬಲಗನ್ನ ಪೂರತಿ ಮಾಡಬೇಕು. ತಪ್ಪಿದಲ್ಲಿ ಮಾಲು ಪುನಹ ಹರಾಜು ಮಾಡಲ್ಪಡುತ್ತೆ, ಅಲ್ಲದೆ ನಷ್ಟಕ್ಕೆ ಮೊದಲ ಹರಾಜ್‌ದಾರನ್ನ ಗುರಿಮಾಡುತ್ತೆ. ಮತ್ತು ಬೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುತ್ತೆ.

ಇತರ ತಪ್ಸೀಲಿಗೆ 1887ನೇ ಇಸವಿ ಸೆಪ್ಟಂಬರು 3ನೇ ತಾರೀಖಿನ ಮೈಸೂರು ಗೆಜೆಟಿನಲ್ಲಿ ಘಾಯಿಷಾಗಿರುವ 1887ನೇ ಇಸವಿ ಆಗಸ್ಟ್ 30ನೇ ತಾರೀಖಿನ 99ನೇ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸ್ ನೋಡಿ.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಮೈಸೂರ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ ೧೮೯೫—96ನೇ ಇಸವಿ ಅರ್ಜೀ ನಂಬರ್ 247.

ಮೃತಪಟ್ಟ ಮುದಿಯಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, 1ನೇ ರಂಗಪ್ಪ, 2ನೇ ತಮ್ಮಯ್ಯ, 3ನೇ ಚಿಕ್ಕರಂಗಪ್ಪ, 4ನೇ ವೀರರಂಗಪ್ಪ, 5ನೇ ದೊಡ್ಡರಂಗಪ್ಪ ಇವರುಗಳು, ಮೃತಪಟ್ಟ ಸದರೀ ಮುದಿಯಪ್ಪನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ತಾಲ್ಲೂಕು ಕಟ್ಟಹಳ್ಳಿ ಹೋಬಳಿ ಅಗ್ರಹಾರ ಸ್ಥಳದ ಸದರೀ ರಂಗಪ್ಪ ವಗೈರೆ 5 ಜನರು, ಸದರೀ ವಾಸಸ್ಥರಾಗಿ ಮೃತಪಟ್ಟ ಮುದಿಯಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಂಗಪ್ಪ ವಗೈರೇರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಫಿಬ್ರವರಿ ತಿಂಗಳ ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುದಿಯಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೫–96ನೇ ಇಸವಿ ಅರ್ಜೀ ನಂಬರ್ 264.

ಮೃತಪಟ್ಟ ಅಗಸರ ಜೋರನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ಜವರನು, ಮೃತಪಟ್ಟ ಸದರೀ ಜೋರನಿಗೆ ಅಂಣ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ತಾಲ್ಲೂಕು ನಗುವನಹಳ್ಳಿ ಸ್ಥಳದ ಸದರೀ ಜವರನು, ಸದರೀ ವಾಸಸ್ಥನಾಗಿ ಮೃತಪಟ್ಟ ಜೋರನ ಜಿಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಜವರನ ಅರ್ಜಿಯನ್ನು ಸ್ ೧೮೯೬ನೇ ಇಸವಿ ಫಿಬ್ರವರಿ ತಿಂಗಳ ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜೋರನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೫–96ನೇ ಇಸವಿ ಅರ್ಜೀ ನಂಬರ್ 265.

ಮೃತಪಟ್ಟ ಅಶ್ವತ್ಥಶಾಸ್ತ್ರಿಗಳ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ರಾಮಾಜೋಯಿಸರು, ಮೃತಪಟ್ಟ ಸದರೀ ಅಶ್ವತ್ಥಶಾಸ್ತ್ರಿಗಳಿಗೆ ವಿಲ್‌ಪಡೆದ ಹಕ್ಕುದಾರ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಕಿಲ್ಲೇ ಸ್ಥಳದ ಸದರೀ ರಾಮಾಶಾಸ್ತ್ರಿಗಳು, ಸದರೀ ವಾಸಸ್ಥರಾಗಿ ಮೃತಪಟ್ಟ ಅಶ್ವತ್ಥಶಾಸ್ತ್ರಿಗಳ ಜಿಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್‌ಮಾಡುವದಕ್ಕೆ ಸ್ ೧೮೬೦ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಾಶಾಸ್ತ್ರಿಗಳ ಅರ್ಜಿಯನ್ನು ಸ್ ೧೮೯೬ನೇ ಇಸವಿ ಫಿಬ್ರವರಿ ತಿಂಗಳ ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಶ್ವತ್ಥಶಾಸ್ತ್ರಿಗಳ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬ನೇ ಇಸವಿ ಜನವರಿ ತಿಂಗಳ 21ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಿಶಿ ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.